ಸಿಲ್ಟ್‌ಅಪ್ ಆಗುತ್ತಿದೆ, ಕಾಡು ಕಡಿಮೆಯಾಗುತ್ತಿದೆ. ಆ ಕೆರೆ ತೂಬನ್ನು ಜಾಸ್ತಿ ಮಾಡಬೇಕು ಎಂದರೆ ಆ ಜನರ ಗಲಾಟೆ ನಮಗೆ. ಅವರು ನಮಗೆ ಹೇಳುತ್ತಾರೆ ಅದನ್ನು ಮಾಡಕೂಡದು ಎಂದು. ಹೀಗೆಲ್ಲಾ ಇರಬೇಕಾದರೆ ಈ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರನ್ನು ಕರೆದು ಕೊಂಡು ಹೋಗಿ – ಅಲ್ಲಿ ಜಾಗ ಇದೆಯೇ ಇಲ್ಲವೇ, ಆದರಿಂದ ಆಗತಕ್ಕಂಥ ಅನಾನುಕೂಲ ಏನು ಎಂಬುದನ್ನು ನೋಡದೇ ಆ ಜನರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ. ಆ ಬಗ್ಗೆ ಹೊಸ ತಹಶೀಲ್ದಾರರಿಗೆ ಏನೂ ಗೊತ್ತಿಲ್ಲ. ಅವನು ಬಂದು ೩ ದಿವಸದಲ್ಲೇ ಅದಲ್ಲವನ್ನೂ ಕೊಡಿಸಿಬಿಟ್ಟಿದ್ದಾರೆ ನಾನು ಈಗ ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಅವರನ್ನೆಲ್ಲಾ ಎವಿಕ್ಟ್ ಮಾಡಿಸಬೇಕು ಮತ್ತು ಆ ಕೆರೆ ಸಿಲ್ಟ್‌ಅಪ್ ಆಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ಅಧ್ಯಕ್ಷರೇ ನಾವು ಈಗಾಗಲೇ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಯವರಿಂದ ಡಿಟೇಲ್ಡ್ ಎನ್‌ಕ್ವೈರಿ ಮಾಡಿಸುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಅವ್ಯವಹಾರ ನಡೆದಿದೆ ಎಂದು ಕಂಡುಬಂದರೆ ಮತ್ತು ಫಾರೆಸ್ಟ್‌ನಲ್ಲಿರ ತಕ್ಕಂಥಹ ಮರಗಿಡಗಳನ್ನು ಕಡಿಯದ ಹಾಗೆ ೧-೯-೭೭ರ ಗೌರ್ನಮೆಂಟ್ ಆರ್ಡರ್‌ಅನ್ನು ಪೂರ್ತಿಯಾಗಿ ರೆಗ್ಯುಲರೈಸ್ ಮಾಡಿದ್ದಾರೆ. ಫಾರೆಸ್ಟ್ ಲ್ಯಾಂಡನ್ನು ಗ್ರಾಂಟ್ ಮಾಡಿಕೊಳ್ಳದೆ ಅನಾಥರೈಸ್ಡ್ ಆಗಿ ಕಲ್ಟಿವೇಟ್ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡಿ ಅವರು ೧೦ ವರ್ಷಗಳಿಂದ ಅವರ ಹೆಸರಿಗೆ ರೆಕಾರ್ಡ್ ಇದೆಯೊ ಇಲ್ಲವೊ ಎನ್ನುವುದನ್ನು ಪರಿಶೀಲನೆ ಮಾಡಿದರೆ ಅವರು ೧೦ ವರ್ಷಗಳಿಂದ ಯಾವ ರೀತಿ ಕಲ್ಟಿವೇಟ್ ಮಾಡುತ್ತಿದ್ದರು ಎನ್ನುವ ಪ್ರಶ್ನೆ ಬರುತ್ತದೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಎನ್‌ಕ್ವೈರಿ ಮಾಡಿಸುತ್ತೇವೆ. ಅವರು ಕಂಡೀಷನ್ ಏನಾದರೂ violate ಮಾಡಿ ತಪ್ಪು ತಿಳಿವಳಿಕೆ ಕೊಟ್ಟು ರೆಗ್ಯೂಲರೈಜ್ ಮಾಡಿಸಿಕೊಂಡಿದ್ದ ಪಕ್ಷದಲ್ಲಿ ಅಂತಹವುಗಳನ್ನು ಡೀಟೈಲ್ಡ್ ಎನ್‌ಕ್ವೈರಿ ಮಾಡಿ ತಪ್ಪು ತಿಳಿವಳಿಕೆ ಕೊಟ್ಟಿರುವುದನ್ನು ಸರಿ ಪಡಿಸಲು ಸರ್ಕಾರ ಎಲ್ಲಾ ವಿಧವಾದ ಪ್ರಯತ್ನವನ್ನು ಮಾಡುತ್ತೇವೆ, ಕಾನೂನು ರೀತಿ ರೆಗ್ಯುಲರೈಜ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

MR. DEPUTY SPEAKER.—Next subject Matter is Under rule 312.

Matters under Rule 312,

(i) reg : Collection of Tuition fee from SC/ST students of Mysore University.

SRI S. S. ARAKERI.—Sir, I am raising the burning issue relating to the Hon. Minister for Education regarding the hardship caused to thousands of SC/ST students of Mysore University due to the decision of the Mysore University to collect tuition fees from the SC/ST students, causing hardship for admission to the Correspondence Course as well as the Continuing Education Course from this year. Therefore, I request the Hon. Minister to issue directions to the Hon. Vice Chancellor for immediate admission of all these students who are waiting for admission.

SRI G. B. SHANKAR RAO. (Minister for Education).—Mr. Speaker Sir, the Correspondence Course and Continuing Education is going on for the last so many years in Mysore University. The hon. member has said that from this year they have been collecting fees from the SC students who have been taking up correspondence course and continuing education course. I have received the notice only

yesterday. I have tried to collect information from the University but I have not been able to collect information so far. I do not know about the Circular issued to the effect that fees from these SC/ST students should be collected. If that is so, I have to verify. I am not aware of any such instructions. I have to collect information from the University and after satisfying myself about the correct position, I can assure the hon. members. It may not be correct to say that the University is collecting fees against the standing orders of the Government.

ಶ್ರೀ ಎಸ್. ಎಸ್. ಆರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ಅದು 'ಇಫ್ಸ್' ಅಂಡ್ 'ಬಟ್ಸ್' ಎಂದು ಕೊಟ್ಟಿದ್ದಾರೆ. ನಾನು ಈಗ ಹೇಳುವುದೇನೆಂದರೆ ನಾವು ಯಾವಾಗ 312ರ ಕೆಳಗೆ ಈ ಅಜೆಂಡಾದಲ್ಲಿ ತೋರಿಸಿದ ಮೇಲಾದರೂ ಯೂನಿವರ್ಸಿಟಿಯ ವೈಸ್ ಚಾನ್ಸಲರರಿಗೆ ಲೈಟ್ ಕಾಲ್ ಮಾಡಿ ಅವರಿಂದ ವಿಷಯ ತಿಳಿದುಕೊಳ್ಳುವುದ ಕ್ಕಾಗುವುದಿಲ್ಲವೆ ? ಇವತ್ತಿನ ದಿವಸ ಸಾವಿರಾರು ವಿದ್ಯಾರ್ಥಿಗಳು ಶಾಲೆಗಳಲ್ಲಿ ಪ್ರವೇಶ ಸಿಗದೆ ಬೀದಿ ಯಲ್ಲಿ ಅಲೆದಾಡುತ್ತಿದ್ದಾರೆ. ಈ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಿಗೆ ಸುಮಾರು 5–6 ವರ್ಷ ಗಳಿಂದಲ್ಲೂ ಶಾಲಾ ಶುಲ್ಕವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಈ ವರ್ಷ ಶಾಲಾ ಶುಲ್ಕವನ್ನು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಸರ್ಕಾರದವರು ಸಮಾಜ ಕಲ್ಯಾಣ ಇಲಾಖೆಯಿಂದ ಟ್ಯೂಷನ್ ಫೀಜು ಕಲೆಕ್ಟ್ ಮಾಡಬೇಕೆಂದು ಹೇಳಿದ್ದಾರೆ. ಇದು ಯುನಿವರ್ಸಿಟಿಗೆ ಸಾಧ್ಯವಿದೆ. ಈ ಯೂನಿವರ್ಸಿಟಿಯಲ್ಲಿ ಫಾರಂಗಳು ಇವೆ. ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವಾಗ ವಿದ್ಯಾರ್ಥಿ ಗಳಿಂದ ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಹರಿಜನ ಮತ್ತು ಗಿರಿಜನರ ಮೇಲೆ ಒಂದು ದುರುದ್ದೇ ಶವನ್ನು ಇಟ್ಟುಕೊಂಡು ಕರ್ನಾಟಕರಾಜ್ಯದಲ್ಲಿ ಇಂತಹ ಒಂದು ಕೆಲಸವನ್ನು ನಡೆಸುತ್ತಿದ್ದಾರೆ. ಇದರಿಂದ ಹರಿಜನ ಮತ್ತು ಗಿರಿಜನರಿಗೆ ಅನ್ಯಾಯವಾಗಿದೆ ಎಂದು ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ವೈಸ್ ಚಾನ್ಸಲರ್‌ರವರಿಗೆ ಸರ್ಕಾರದ ಗಮನಕ್ಕೆ ಬಂದಿದ್ದರೂ ಅವರಿಗೆ ಸರ್ಕಾರ ಯಾವ ಶಿಕ್ಷೆಯನ್ನು ಏತಕ್ಕೆ ವಿಧಿಸಲಿಲ್ಲ ? ಆದ್ದರಿಂದ ಮಾನ್ಯ ಮಂತ್ರಿಗಳನ್ನು ನಾನು ಅಧ್ಯಕ್ಷರ ಮುಖಾಂತರ ಮತ್ತೊಮ್ಮೆ ಕೇಳಿಕೊಳ್ಳುವುದೇನೆಂದರೆ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಶುಲ್ಕವನ್ನು ತೆಗೆದುಕೊಳ್ಳದೆ ಇರುವಂತೆ ಆದೇಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—He has already assured.

SRI S. S. ARAKERI.—Let his reply why he did not put a lightning call to the Vice Chancellor and get the information.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೆ ಇಪತ್ತು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಡ್ಮಿಷನ್ ಫೀಜು ವಸೂಲು ಮಾಡುತ್ತಿದ್ದೇವೆ. ಆದರೆ ಅಡ್ಮಿಷನ್ ಫೀಜು ವಸೂಲು ಮಾಡದೆ ಯಾರಿಗೂ ಬಿಟ್ಟಿಲ್ಲ.

ಶ್ರೀ ಎಸ್. ಎಸ್. ಆರಕೇರಿ.—ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ 1 ರೂಪಾಯಿ ಶುಲ್ಕವಲ್ಲ ?

ಶ್ರೀ ಜಿ. ಬಿ. ಶಂಕರರಾವ್.—ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ 5–6 ವರ್ಷಗಳಿಂದ ಇಲ್ಲಿಯವರೆವಿಗೆ ವಸೂಲು ಮಾಡುತ್ತಿದ್ದರು ಎಂದು ತೀರ್ಮಾನವಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಫೀಜು ಫ್ರೀಯಾಗಿ ಯಾರಿಗೂ ಬಿಟ್ಟಿಲ್ಲ. ಕರೆಸ್ಪಾಂಡೆನ್ಸ್ ಕೋರ್ಸ್ ಮಾಡುವವರೂ ಸಹಾ ಫೀಜು ಕೊಡಲೇಬೇಕಾಗುತ್ತದೆ.

ಶ್ರೀ ಡಿ. ಟಿ. ರಾಮು.—ಮಾನ್ಯ ಅಧ್ಯಕ್ಷರೇ ವೈಸ್ ಚಾನ್ಸಲರನ್ನು ಕರೆಸಿ ಅವರಿಂದ ವಿಷಯ ಏನು ಎಂದು ಸರಿಯಾಗಿ ತಿಳಿದುಕೊಂಡು ಉತ್ತರ ಕೊಡಬೇಕು. ಆದು ಬಿಟ್ಟು ಆರೀತಿ ಇರಬಹುದು. ಈ ರೀತಿ ಇರಬಹುದು ಎಂದು ಹೇಳಿದರೆ ಏನು ಅರ್ಥ ? ಆದ್ದರಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ 2–3 ವರ್ಷಗಳಿಂದ ಇದವರಿಗೂ ಹರಿಜನ

ಮತ್ತು ಗಿರಿಜನ ವಿದ್ಯಾರ್ಥಿಗಳಿಂದ ಶಾಲಾ ಪ್ರವೇಶ ಶುಲ್ಕವನ್ನು ತೆಗೆದುಕೊಂಡಿಲ್ಲ. ಇದ್ದರಿಂದ ಸಂಬಂಧಪಟ್ಟ ವೈಸ್ ಚಾನ್ಸಲರ್‌ಗೆ ಸೂಚನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI G.B. SHANKAR RAO.—For anything and everything we cannot send for Vice Chancellor. I have already made it clear that I will collect information and try to know the correct position and supply the information. I have not shirked my responsibility. The hon. member should understand this.

MR. DEPUTY SPEAKER.—Get it as early as possible.

(Interruption)

SRI G. B. SHANKAR RAO.—I would assure the hon. members that legisimate interest? of the SC people will be safeguarded.

MR. DEPUTY SPEAKER.—Next item under rule 312.

(iii) *re : Offering of Prayers in Kannada by Christians in the Churches.*

† ಶ್ರೀ ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ ತಮ್ಮ ಅಪ್ಪಣೆ ಪಡೆದು ಬೆಂಗಳೂರು ನಗರದಲ್ಲಿ ಇಂದು ಕನ್ನಡ ಕ್ರೈಸ್ತರು ಪಡುತ್ತಿರುವ ಭವಣೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲು ಕ್ರೈಸ್ತರು ಲ್ಯಾಟೀನ್ ಭಾಷೆಯಲ್ಲಿ ತಮ್ಮ ಪೂಜಾ ವಿಧಾನಗಳನ್ನು ನಡೆಸುತ್ತಿದ್ದರು. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ರಾಜ್ಯದ ಆಡಳಿತ ಭಾಷೆ ಕನ್ನಡ ಎಂದು ಆದಮೇಲೆ ಎಲ್ಲಾ ಕನ್ನಡ ಕ್ರೈಸ್ತರೂ ತಮ್ಮ ದೇವಾಲಯಗಳಲ್ಲಿ ಪೂಜಾವಿಧಾನಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಆದೇಶವಿತ್ತರು. ಈ ಆದೇಶದಮೇಲೆ ಎಲ್ಲಾ ಕ್ರೈಸ್ತ ದೇವಾಲಯಗಳಲ್ಲಿ ಪೂಜಾವಿಧಾನಗಳು ಕನ್ನಡದಲ್ಲಿ ನಡೆಯಲು ಸಹಕರಿಸಿದ ಆಂದಿನ ಗುರುಗಳಾದಂತಹ ಶ್ರೀಮಾನ್ ಗೋತಾಕ್ ಮರಿಯವರು ಸಲೀಸಾಗಿ ನಡೆಸಿಕೊಂಡು ಬರುತ್ತಿದ್ದರು. ಆದರೆ ಈಗಿನ ನೂತನ ಸ್ವಾಮಿಗಳು ಗುರುಗಳಾಗಿ ಬಂದಮೇಲೆ ಕ್ರೈಸ್ತ ದೇವಾಲಯಗಳಲ್ಲಿ ಕನ್ನಡದಲ್ಲಿ ಪೂಜಾವಿಧಾನಗಳು ನಡೆಯುವ ಬಗ್ಗೆ ಸಮಸ್ಯೆ ಬಂತು. ಇಂದಿನ ಗುರುಗಳಾದಂತಹ ಶ್ರೀಮಾನ್ ಆರೋಕ್ಯಸ್ವಾಮಿಯವರು ಕ್ರೈಸ್ತ ದೇವಾಲಯಗಳಲ್ಲಿ ಕನ್ನಡದಲ್ಲಿ ಪೂಜಾವಿಧಾನಗಳನ್ನು ನಡೆಸಲು ಅಪ್ಪಾಯ ತರತಕ್ಕಂತಹ ಪರಿಸ್ಥಿತಿಯನ್ನು ಉಂಟುಮಾಡಿದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೇಳಬಯಸುವುದೇನೆಂದರೆ ನಮ್ಮ ಬೆಂಗಳೂರು ನಗರವನ್ನು ತಮಿಳು ನಾಡಿಗೆ ವಹಿಸಿಕೊಡಲು ತಯಾರಾಗಿದೆ ಎನು ? ಎನ್ನುವ ಒಂದು ಪ್ರಶ್ನೆಯನು ಕೇಳಬೇಕಾಗಿದೆ. ನಮ್ಮ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರು ನಗರದಲ್ಲಿರುವ ಕ್ರೈಸ್ತ ದೇವಾಲಯಗಳಲ್ಲಿ ಪೂಜಾ ವಿಧಾನಗಳನ್ನು ತಮಿಳಿನಲ್ಲಿ ನಡೆಸಲು ಸಾಧ್ಯವೇನು ? ಅದು ಎಂದೆಂದಿಗೂ ಸಾಧ್ಯವಿಲ್ಲದ ಮಾತು. ಕನ್ನಡ ನಾಡಿನಲ್ಲಿ ಕನ್ನಡಭಾಷೆಯನ್ನು ಕಲಿಯಬೇಕು ? ಕನ್ನಡ ಭಾಷೆಯನ್ನು ಕಲಿಯದಿದ್ದರೆ ಅದು ನಾಚಿಕೆಗೇಡು ಎನ್ನುವ ಒಂದು ಪ್ರಶ್ನೆ ಬರುತ್ತದೆ. ನಾವು ಮದ್ರಾಸ್‌ಗೆ ಹೋಗಿ ಕನ್ನಡ ಭಾಷೆಯನ್ನು ಕಲಿಯಬೇಕು ಎಂದು ಹೇಳುತ್ತಿಲ್ಲ.

ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಕ್ರಿಶ್ಚಿಯನ್ ದೇವಾಲಯಗಳಲ್ಲಿ ತಮಿಳಿನಲ್ಲಿಯೇ ಪೂಜೆ ಮಾಡಬೇಕೆಂಬವಾದ ಏನಿದೆ, ಇದನ್ನು ಕನ್ನಡಿಗರಾದ ನಾವುಗಳು ಸಹಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಏನಾದರು ಮಾಡಿ ಒಂದು ಪೂರ್ಣ ವಿರಾಮ ಹಾಕಲೇ ಬೇಕಾಗುತ್ತದೆ. ನಮ್ಮ ಕನ್ನಡ ನಾಡಿನಲ್ಲಿಯೇ ಕನ್ನಡಕ್ಕೆ ಸ್ಥಾನ ಬೇಕು ಎಂದು ಕೇಳುವಂಥ ಪ್ರಸಂಗ ಬಂದಿರುವುದು ನಾಚಿಕೆಗೇಡಿನ ಪ್ರಸಂಗ ನಾವು ಏನು ಕೇರಳಾಕ್ಕೆ ಹೋಗಿ ಇಲ್ಲವೇ ತಮಿಳುನಾಡಿಗೆ ಹೋಗಿ ಕನ್ನಡದಲ್ಲಿ ಪೂಜೆ ಮಾಡುತ್ತೇವೆಂದು ಕೇಳುತ್ತಿಲ್ಲ. ನಮ್ಮ ನಾಡಿನಲ್ಲಿ ಅದರಲ್ಲಿಯೂ ನಮ್ಮ ರಾಜ್ಯದ ರಾಜಧಾನಿಯಲ್ಲಿರುವ ಚರ್ಚ್‌ಗಳಲ್ಲಿ ಕನ್ನಡದಲ್ಲಿ ಪೂಜೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. ಇದು ನಮ್ಮ ಅಜನ್ಮಸಿದ್ಧವಾದಂಥ ಈ ನಮ್ಮ ಹಕ್ಕನ್ನು ನಾವು ಪತ್ರಿಭಾದನೆ ಮಾಡುತ್ತಿದ್ದೇವೆ. ಈ ಒಂದು ಹಕ್ಕಿಗಾಗಿ ಕನ್ನಡದ ಕ್ರೈಸ್ತರು ಒಂದು ಸಮ್ಮೇಳನ ಸಹ ನಡೆಸಿದರು. ಆದರೆ ಅಂತಹವರ ಮೇಲೆ ದಬ್ಬಾಳಿಕೆ ನಡೆಯುತ್ತು. ಹಿಡಿದುಕೊಂಡು